## ಅವ್ವ ನನ್ನೆತ್ತು ಮುದ್ದಾಡುವಾಗ




ಮೈಸೂರು ಜಿಲ್ಲೆಯ ಬೈರಾಪುರದ ಎಂ. ಜವರಾಜ್ ‘ಮೆಟ್ಟು ಹೇಳಿದ ಕಥಾ ಪ್ರಸಂಗ’ ಎನ್ನುವ ದೀರ್ಘ ಕಥನಕಾವ್ಯದ ಕವಿ. ‘ಅವ್ವ ನನ್ನೆತ್ತು ಮುದ್ದಾಡುವಾಗ’ ಅವರ ನಲವತ್ತೈದು ಕವಿತೆಗಳ ಸಂಕಲನ. ತಮ್ಮನ್ನು ಕಾಡಿದ ವರ್ತಮಾನದ ತವಕತಲ್ಲಣಗಳನ್ನು ಕಾವ್ಯದ ರೂಪದಲ್ಲಿ ಹಿಡಿದಿಡಲು ಅವರು ಪ್ರಯತ್ನಿಸಿದ್ದಾರೆ. ಈ ಪ್ರಯತ್ನದಲ್ಲಿ ಕಾವ್ಯಕ್ಕಿಂತಲೂ ಹೆಚ್ಚು ಗಮನಸೆಳೆಯುವುದು ಕವಿಯ ಪ್ರಾಮಾಣಿಕತೆ. ರಾಮ, ಗಾಂಧಿ, ಅಕ್ಕ, ಬುದ್ಧ, ಲಂಕೇಶ್ ಸೇರಿದಂತೆ ಕವಿಯನ್ನು ಪ್ರಭಾವಿಸಿದ ಚೇತನಗಳು ಇಲ್ಲಿನ ರಚನೆಗಳ ಸಾಕ್ಷಿಪ್ರಜ್ಞೆಯೂ ಆಗಿವೆ.

ಸಂಕಲನದ ಶೀರ್ಷಿಕೆಯೂ ಆಗಿರುವ ‘ಅವ್ವ ನನ್ನೆತ್ತು ಮುದ್ದಾಡುವಾಗ’ ಕವಿತೆಯ ಒಂದು ಭಾಗ: ‘ಗವ್ವೆನ್ನುವ ಕತ್ತಲಲ್ಲಿ/ ನಿಧಾನಕೆ ಮೂಡ್ತಿದ್ದ ಚಂದ್ರ/ ಅವ್ವ, ನನ್ನೆತ್ತು ಮುದ್ದಾಡುವಾಗ./ ಊರ ಮುಂದಲ ಬೇಲಿ ಮರೆಯಲ್ಲೇ/ ಅವ್ವನ್ನ ಕಣ್ಣೆಟ್ಟಿತ್ತು/ ನೆಟ್ಟದ್ ಕಣ್ಣೆ ಮೂಡ್ತಿತ್ತು/ ಅಪ್ಪ ಬರುವ ಹಾದಿ!’. ಹೀಗೆ ವೈಯಕ್ತಿಕ ಸಂಗತಿಗಳ ಬಗ್ಗೆ ಬರೆಯುವಾಗ ಜವರಾಜ್‌ರ ರಚನೆಗಳು ಕೊಂಚ ಸೂಚ್ಯವಾಗುತ್ತವೆ. ಸಾರ್ವತ್ರಿಕ ಸಂಗತಿಗಳ ಬಗ್ಗೆ ಬರೆಯುವಾಗ ಸೂಚ್ಯತೆಯನ್ನು ಬಿಟ್ಟುಕೊಡುತ್ತವೆ. ಬುದ್ಧನ ನಿಶ್ಶಬ್ದ ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನವೂ ಶಬ್ದಗಳ ಸದ್ದಿನಲ್ಲೇ ಕೊನೆಗೊಳ್ಳುವುದು.

**ಲೇ: ಎಂ. ಜವರಾಜ್; ಪು: 108; ಬೆ: ₹ 120; ಪ್ರ: ಶ್ರೀಸಾಯಿ ಸಾಹಿತ್ಯ, ಬೆಂಗಳೂರು. ಫೋನ್: 99454 60372.**

---

## ತುಷಾರ ಹಾರ




‘ಇದು ಒಡಲ ನೋವಿನ ಕಥನ’ ಎನ್ನುವುದು ‘ತುಷಾರ ಹಾರ’ ಕೃತಿ ಶೀರ್ಷಿಕೆಯ ಅಡಿಟಿಪ್ಪಣಿ. ‘ನೋವಿನ ಹಾರದಲ್ಲಿ ಪೋಣಿಸಿದ ಸವಿನೆನಪುಗಳ ಹಾರ – ತುಷಾರಹಾರ’ ಎನ್ನುವುದು ನೇಮಿಚಂದ್ರರ ಉದ್ಗಾರ. ಹೌದು, ಈ ಕೃತಿಯ ಸ್ಥಾಯಿಭಾವ ನೋವು. ನೋವನ್ನು ಭಿತ್ತಿಯಾಗುಳ್ಳ ಈ ಕಥನ, ಜೀವನಪ್ರೀತಿ ಹಾಗೂ ಜೀವನದ ಘನತೆಯ ಕಾರಣದಿಂದಾಗಿ ಮುಖ್ಯವೆನ್ನಿಸುತ್ತದೆ. ತಾಯಿಪ್ರೇಮವನ್ನು ಮಾನವಪ್ರೇಮದ ರೂಪದಲ್ಲಿ ಅನುಭವಕ್ಕೆ ತರುತ್ತದೆ.

ಶ್ಯಾಮಲಾ ಅವರ ಮಗ ತುಷಾರ್ ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆ ಮಾಡಿದವರು; ಉದ್ಯೋಗದಲ್ಲೂ ಸೈ ಅನ್ನಿಸಿಕೊಂಡವರು. ಯಶಸ್ಸಿನ ವಿವಿಧ ಉತ್ತುಂಗಗಳನ್ನು ಮುಟ್ಟಬೇಕಿದ್ದ ಕನಸುಗಾರ, ಮಧ್ಯವಯಸ್ಸಿನಲ್ಲಿ ಕ್ಯಾನ್ಸರ್ ಕಾರಣದಿಂದ ಬದುಕಿಗೆ ನಮಸ್ಕಾರ ಹೇಳುವುದು ಈ ಕೃತಿಯ ಕಥನ. ಈ ಕೃತಿಯ ಲೇಖಕಿ ಶ್ಯಾಮಲಾ ಮಾಧವ ಅನುವಾದಗಳಿಂದ ಸಹೃದಯರಿಗೆ ಪರಿಚಿತರು. ಅವರ ಆರ್ದ್ರ ಭಾವ, ಕರುಳಿನಭಾಷೆ ಹಾಗೂ ಜೀವನದ ಕುರಿತ ನಿರ್ಮಲ ಧೋರಣೆ ಈ ಕೃತಿಯ ಘನತೆಯನ್ನು ಹೆಚ್ಚಿಸಿವೆ. ನೆನಪು ಮತ್ತು ನೋವುಗಳ ಜುಗಲಬಂದಿಯ ಈ ಕಥನ ಓದುಗರನ್ನು ವಿಷಣ್ಣರಾಗಿಸುವುದರ ಜೊತೆಗೆ, ಬದುಕನ್ನು ಎದುರಿಸಲು ಬೇಕಾದ ದಿಟ್ಟತನವನ್ನೂ ನೀಡುವಂತಿದೆ.

**ಲೇ: ಶ್ಯಾಮಲಾ ಮಾಧವ, ಪು: 154; ಬೆ: ₹ 175; ಪ್ರ: ಬಹುರೂಪಿ, ಬೆಂಗಳೂರು. ಫೋನ್: 70191 82729.**